**ಪಾಟೀ ಸವಾಲು ಶ್ರೀ ಹೆಚ್.ಜಿ.ಎ ವಕೀಲರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ನಾನು ಎಂದಿಗೂ ಮೂಡಿಗೆರೆ ಮತ್ತು ಬಣಕಲ್ ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ಅದೇ ರೀತಿ ದಿ.17.03.2023 ರಂದು ನನ್ನ ಮಗಳಿಗೆ ಭಾಗ್ಯಲಕ್ಷ್ಮೀ ಬಾಂಡ್ ಬಂದಿದೆ ಎಂದು ಚಾಸಾ-9 ರವರಿಗೆ ಮೂಡಿಗೆರೆಗೆ ಹೋಗಿ ಬರುವುದಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಆ ದಿನ ನಾನು ಚಾಸಾ-1, 8 ಮತ್ತು 10 ರವರು ಬೆ.10.00 ಸಮಯಕ್ಕೆ ಮನೆಯ ಬೀಗ ಹಾಕಿ ನಮ್ಮ ಮನೆಯಿಂದ ಬಾಂಡ್ ತರಲು ಹೊರಟೆವು ಎಂದರೆ ಸರಿಯಲ್ಲ. ನಂತರ ದೇವಸ್ಥಾನಕ್ಕೆ ಹೊರಡುವ ಸಮಯದಲ್ಲಿ ದಿ.23.03.2023 ರಂದು ಅಲ್ಮೇರವನ್ನು ಚಾಸಾ-1 ರವರು ತೆಗೆದು ನೋಡಲಾಗಿ ಅಲ್ಲಿ ಇದ್ದಂತಹ ಚಿನ್ನಾಭರಣಗಳು ಕಳುವು ಆಗಿದ್ದವು ಎಂದರೆ ಸರಿಯಲ್ಲ. ನಂತರ ಚಾಸಾ-9 ಮತ್ತು 1 ರವರು ಸದರಿ ವಿಷಯದ ಕುರಿತು ಬಣಕಲ್ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ದಿ.02.04.2023 ರಂದು ಪೋಲಿಸ್ ಠಾಣೆಯಿಂದ ಕರೆ ಮಾಡಿ ಕಳ್ಳತನವಾಗಿದ್ದ ಚಿನ್ನ ಸಿಕ್ಕಿದೆ ಎಂದು ನಮಗೆ ಕರೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ಅಲ್ಮೇರದಿಂದ 3 ಗ್ರಾಂ ಚಿನ್ನದ ಓಲೆ, 15 ಗ್ರಾಂ ಚಿನ್ನದ ಓಲೆ, 10 ಗ್ರಾಂ ಚಿನ್ನದ ಸರ, 29 ಗ್ರಾಂ ನಕ್ಲೆಸ್ ಮತ್ತು 10 ಗ್ರಾಂ ನ ಮತ್ತೊಂದು ಸರ ಕಳುವಾಗಿದ್ದವು ಎಂದರೆ ಸರಿಯಲ್ಲ. ದಿ.02.04.2023 ರಂದು ಪೋಲಿಸರು ಸ್ಥಳ ಮಹಜರ್ ಕ್ರಮವನ್ನು ಜರುಗಿಸಿ ಫೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ದಿ.20.02.2025 ರಂದು ನಾನು ನ್ಯಾಯಾಲಯದ ಮುಂದೆ ಸಾಕ್ಷಿಯನ್ನು ನುಡಿದ ನಂತರ ನಮ್ಮ ಊರಿನ ಹಿರಿಯರ ಸಮಕ್ಷಮ ಮಾತುಕತೆಯಾಗಿರುತ್ತದೆ ಎಂದರೆ ಸರಿ. ನಾನು ಆರೋಪಿಯೊಂದಿಗೆ ರಾಜಿಯಾದ ಕಾರಣ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.